# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಅಧೀಕ್ಷಕ ಅಭಿಯಂತರರು(ವಿ)
ಕಾ ಮತ್ತು ಪಾ ವೃತ್ತ, ಕೇಶ್ವಾಪೂರ, ಹುಬ್ಬಳ್ಳಿ-23
Tel: 0836-2364144, Fax: 0836-2366184

**Superintending Engineer(Ele)**
**O & M Circle, Keshwapur, Hubballi-23**
**E-mail ID: seehbl.hescom@gmail.com**



Corporate Identity Number (CIN) : U31401KA2002SGC030437


## ಗ್ರಾಹಕರ ಕುಂದುಕೊರತೆಗಳ ನಿವಾರಣೆ ವೇದಿಕೆ

ಕಾರ್ಯ ಮತ್ತು ಪಾಲನೆ ವೃತ್ತ, ಹೆಸ್ಕಾಂ, ಹುಬ್ಬಳ್ಳಿ, ಧಾರವಾಡ ಜಿಲ್ಲೆ

**ಪ್ರಕರಣ ಸಂಖ್ಯೆ:230**

**ವೇದಿಕೆಯ ಸದಸ್ಯರು:**

ಶ್ರೀ **ಎ ಎಚ್ ಕಾಂಬಳೆ,** ಅಧೀಕ್ಷಕ ಇಂಜಿನೀಯರ(ವಿ)ಕಾಮತ್ತು ಪಾ ವೃತ್ತ ಹೆಸ್ಕಾಂ ಹುಬ್ಬಳ್ಳಿ ಹಾಗೂ ವೇದಿಕೆಯ ಅಧ್ಯಕ್ಷರು.

ಶ್ರೀ **ರಾಮಪ್ಪ. ಎನ್. ಎನ್,** ಉಪಲೆಕ್ಕ ನಿಯಂತ್ರಣಾಧಿಕಾರಿ ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ವೇದಿಕೆಯ ಸದಸ್ಯರು.

ಶ್ರೀಮತಿ, **ಲೀಲಾ ಆರ್ ಹಿರೇಮಠ,** ವಕೀಲರು, ಆಯೋಗದಿಂದ ನಿಯೋಜಿಸಲಾದ ಸದಸ್ಯರು.

M/S, Kanchan.V.G,
(R R No : MP9335)
B-498, Industrial, Estate,
Gokul Road, Hubballi. **.............ದೂರುದಾರರು.**

**ವಿರುದ್ಧ,**

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)
ಕಾ ಮತ್ತು ಪಾ ಶಹರ ಉಪವಿಭಾಗ-3,
ಹೆಸ್ಕಾಂ, ಹುಬ್ಬಳ್ಳಿ. **..................ಪ್ರತಿವಾದಿಗಳು.**

**ಪೀಠಿಕೆ:**

1. ಶ್ರೀಮತಿ, ಕಾಂಚಣಾ ವಿ ಜಿ. ಇವರ ಸ್ಥಾವರ ಸಂಖ್ಯೆ: : MP9335 ನೇದ್ದ ಸ್ಥಾವರವನ್ನು ಗ್ರಾಹಕರು ಸ್ಥಾವರವನ್ನು ತಮ್ಮ ಹೆಸರಿನಲ್ಲಿ ದಿನಾಂಕ:06-01-2017 ರಂದು ಎಲ್.ಟಿ-5 ಜಕಾತಿಯಡಿಯಲ್ಲಿ ಸಂಪರ್ಕಿತಗೊಂಡಿರುತ್ತದೆ. ಸ.ಕಾ.ನಿ.ಇಂ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-3, ಹೆಸ್ಕಾಂ, ಹುಬ್ಬಳ್ಳಿರವರು ಸಂಖ್ಯೆ:639896503012 ದಿನಾಂಕ:12-12-2017 ರಲ್ಲಿ ರೂ. 38,736/-ಗಳನ್ನು ತಪ್ಪಾಗಿ ಬೇಡಿಕೆ ಹೆಚ್ಚಿಸಿ, ಬಿಲ್ ಮಾಡಿ ನೀಡಿರುತ್ತಾರೆಂದು ಆಕ್ಷೇಪಿಸಿದ್ದು, ಸದರಿ ಬಿಲ್ಲನ್ನು ಪರಿಷ್ಕರಿಸಿ, ನೀಡುವಂತೆ, ದಿನಾಂಕ:03-01-2018 ರಲ್ಲಿ ವೇದಿಕೆಗೆ ವಿನಂತಿಸಿಕೊಂಡಿರುತ್ತಾರೆ.

2. ಸ್ಥಾವರ ಸಂಖ್ಯೆ: : MP9335 ನೇದ್ದ ಸ್ಥಾವರವು ದಿನಾಂಕ: 06-01-2017 ರಂದು ಎಲ್.ಟಿ-5 ಜಕಾತಿಯಡಿಯಲ್ಲಿ ಸಂಪರ್ಕಿತಗೊಂಡಿರುತ್ತದೆ. ಸದರಿ ಸ್ಥಾವರವು **LT-5** ದಿಂದ **LT-3** ಜಕಾತಿಗೆ ವಿದ್ಯುತ್ ದುರ್ಬಳಕೆಯಾಗಿರುವುದರಿಂದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಎಮ್.ಆರ್.ಟಿರವರು ವರದಿ ಸಲ್ಲಿಸಿದ್ದು, ವರದಿಯನ್ವಯ ರೂ.24,697/-ಗಳ ಹಿಂಬಾಕಿ ನೋಟೀಸ್‌ನ್ನು ಸ.ಕಾ.ನಿ.ಇಂ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-3ರವರ ಪತ್ರ ಸಂಖ್ಯೆ:6820 ದಿನಾಂಕ:01-03-2017 ರಲ್ಲಿ ತಾತ್ಕಾಲಿಕ ನೋಟೀಸ್ ಜಾರಿ ಮಾಡಲಾಗಿರುತ್ತದೆ. ಸದರಿ ಗ್ರಾಹಕರು ಯಾವುದೇ ಆಕ್ಷಪಣೆ ಸಲ್ಲಿಸದೇ ಇವರು ಕಾರಣ ಸ.ಕಾ.ನಿ.ಇಂ(ವಿ), ಶಹರ ಉಪ ವಿಭಾಗ-3ರವರು ಪತ್ರ ಸಂಖ್ಯೆ:7182 ದಿನಾಂಕ:18-03-2010 ರಲ್ಲಿ ಅಂತಿಮ ಕಂದಾಯ ನಿರ್ಧರಣಾ ಆದೇಶವನ್ನು ನೀಡಲಾಗಿದೆ. ಸದರಿ ಸ್ಥಾವರಕ್ಕೆ ವಿದ್ಯುತ್ ಅಧಿನಿಯಮ 42.06 ರ ಪ್ರಕಾರ ಜಕಾತಿ ದುರಪಯೋಗ ಮಾಡಿಕೊಂಡಿದ್ದನ್ನು ಖಚಿತಪಡಿಸಿಕೊಂಡು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ). ಎಮ್.ಆರ್.ಟಿ ಹುಬ್ಬಳ್ಳಿ ಇವರು ಹಿಂಬಾಕಿ ಪ್ರಕರಣವೆಂದು ದಾಖಲಿಸಿದ್ದು, ಕ್ರಮಬದ್ಧವಾಗಿರುತ್ತದೆ ಎಂದು ಸ.ಕಾ.ನಿ.ಇಂ(ವಿ), ಶಹರ ಉಪವಿಭಾಗ-3, ಹೆಸ್ಕಾಂ, ಹುಬ್ಬಳ್ಳಿರವರು ವೇದಿಕೆಗೆ ವಿನಂತಿಸಿಕೊಂಡಿರುತ್ತಾರೆ.

3. ಸದರ ಪ್ರಕರಣವನ್ನು ದಿನಾಂಕ: 26-03-2018 ರಂದು ವಿಚಾರಣೆಯನ್ನು ನಡೆಸಲಾಯಿತು. ನಿಗಮದ ಪರವಾಗಿ ಶ್ರೀ ರಾಜೇಶ ಬಿ ಕಲ್ಯಾಣಶೆಟ್ಟಿ. ಸ.ಕಾ.ನಿ.ಇಂ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-3, ಹೆಸ್ಕಾಂ, ಹುಬ್ಬಳ್ಳಿ ಹಾಗೂ ಗ್ರಾಹಕರು ಹಾಜರಿದ್ದರು.

**ಗ್ರಾಹಕರು Smt. KanchanV.G ಹುಬ್ಬಳ್ಳಿ ಇವರ (ಎ) ಫಾರ್ಮನೋದಿಗೆ ಸಲ್ಲಿಸಿದ ಲಿಖಿತ ಹೇಳಿಕೆ**

Sub: Erroneous Bill Raised.

----*****-----

With reference to above subject we would like to bring to your kind notice that for the above RR No :MP 9335 we have Received erroneous HESCOM bill no:63989650312 dated 12.12.2017 for Rs 38736/- which has been wrongly billed by AEE, HESCOM, city sub division-3, Gokul Road, Hubli-580030.

The Details are As Follows,

1) The said connection at the industrial shed was vacant up to December-2016.
2) Subsequently on 31st Jan 2017 we have applied for change of tariff From LT5 To LT3 and load reduction also and we paid necessary fees Vide Receipt no:6398951000 & 6398957235 and please find enclosed Xerox of the receipt, OM copy for your reference.
3) The MRT has visited us on 15.02.2017 and has advised for back billing.
4) In the month of January we rented the premises for the Godown purpose please find enclosed agreement copy for your reference.
5) The AEE, HESCOM, city sub division-3, Gokul Road, without verifying the facts has purposely raised Erroneous Bill after six months of fitment of New meter.

As such we request you to kindly issue rectified bill and take necessary action on the AEE for unnecessary Harassing the consumer.

**ಸ್ಥಾವರ ಸಂಖ್ಯೆ: MP9335 M/S, Kanchan.V.G, ಇವರ ಪ್ರಕರಣಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಉಪವಿಭಾಗ-1 ಹುಬ್ಬಳ್ಳಿರವರ ಹೇಳಿಕೆ:**

ವಿಷಯ: ಆರ್ ಆರ್ ನಂ:MP9335 M/S, Kanchan.V.G Auto Ma B-498, Industrial Estate Gokul Road ಹುಬ್ಬಳ್ಳಿ ಇವರ ಸ್ಥಾವರಕ್ಕೆ ಹಿಂದಾಕರಣೆ ಬಿಲ್ಲು ಆಕರಣೆ ಮಾಡಿದ ಬಗ್ಗೆ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಶಹರ ಉಪವಿಭಾಗ-3 ರಲ್ಲಿನ ಗ್ರಾಹಕರಾದ MP9335 M/S, Kanchan.V.G Auto Ma B-498, Industrial Estate Gokul Road ಹುಬ್ಬಳ್ಳಿ ಇವರ ಆರ್.ಆರ್.ಸಂಖ್ಯೆ: MP9335 ಸ್ಥಾವರಕ್ಕೆ ಜಕಾತಿ ದುರ್ಬಳಕೆಗೆ ಹಿಂಬಾಕಿ ಮಾಡಿರುವ ಬಗ್ಗೆ ಇವರು ತಮ್ಮಲ್ಲಿ ಸಲ್ಲಿಸಿರುವ ಮೇಲ್ಮನವಿ ಬಗ್ಗೆ ಈ ಕೆಳಕಂಡ ಅಂಶಗಳನ್ನು ತಮ್ಮ ಆದ್ಯ ಗಮನಕ್ಕೆ ತರಬಯಸಲಾಗಿದೆ.

ಕಂದಾಯ ವಿವರ:

1) ಆರ್.ಆರ್.ಸಂಖ್ಯೆ: MP9335
2) ಗ್ರಾಹಕರ ಹೆಸರು: M/S, Kanchan.V.G Auto Ma
3) ಸಂಪರ್ಕ ದಿನಾಂಕ:06.01.1997

.....3

4) ಜಕಾತಿ : ಎಲ್.ಟಿ-3

5) ಸಂಪರ್ಕಿತಬಾರ : 8 KW

6) ಮಂಜೂರಾದ ಭಾರ : 8 KW

1) ಆರ್.ಆರ್.ಸಂಖ್ಯೆ: MP9335 M/S, Kanchan.V.G Auto Ma ಇವರ ಸ್ಥಾವರಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್(ವಿ), ಮೀಟರ ಪರೀಕ್ಷಣಾ ಉಪವಿಭಾಗ (MRT) ಹುಬ್ಬಳ್ಳಿ ಇವರು ದಿನಾಂಕ:17.02.2017 ರಂದು ಸ್ಥಳ ಪರಿಶೀಲನೆ ಮಾಡಿ ಸದರಿ ಸ್ಥಾವರಕ್ಕೆ ಜಕಾತಿ ದುರಪಯೋಗ (LT5 To LT3) ಆಗಿದೆ ಎಂದು ಪ್ರಕರಣ ದಾಖಲಿಸಿ ಹಿಂಬಾಕಿ ರೂ 24697/- ಬಿಲ್ಲು ಮಾಡಿರುತ್ತಾರೆ.

2) ಆರ್.ಆರ್.ಸಂಖ್ಯೆ: MP9335 M/S, Kanchan.V.G Auto Ma ಇವರ ಸ್ಥಾವರಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್(ವಿ), ಮೀಟರ ಪರೀಕ್ಷಣಾ ಉಪವಿಭಾಗ (MRT) ಹುಬ್ಬಳ್ಳಿ ಇವರು ದಿನಾಂಕ:15.02.2017 ರಂದು ಸ್ಥಳ ಪರಿಶೀಲನೆ ಮಾಡಿ ಸದರಿ ಸ್ಥಾವರಕ್ಕೆ ಜಕಾತಿ ದುರಪಯೋಗ (LT5 To LT3) ಆಗಿದೆ ಎಂದು ಪ್ರಕರಣ ಸಂಖ್ಯೆ:1439 ದಿನಾಂಕ:15.02.2017 ರ ಪ್ರಕಾರ ವರದಿ ನೀಡಿರುತ್ತಾರೆ ಹಿಂಬಾಕಿ ಮೊತ್ತ ರೂ 24697/- ಬಿಲ್ಲು ಆಗಿರುತ್ತದೆ.

3) ಸದರಿ ಪ್ರಕರಣಕ್ಕೆ ಗ್ರಾಹಕರಿಗೆ ಈ ಕಛೇರಿ ಪತ್ರ ಸಂಖ್ಯೆ:ಸಕಾನಿ(ವಿ)/ಸಲೆ/ಹಿಸ/ಎಫ್-12/6820 ದಿನಾಂಕ:01.03.2017 ರಂದು ತಾತ್ಕಾಲಿಕ ನೋಟಿಸ ಜಾರಿ ಮಾಡಲಾಗಿದೆ ಹಿಂಬಾಕಿ ಮೊತ್ತ ರೂ 24697/- ಬಿಲ್ಲು ಆಗಿರುತ್ತದೆ.

4) ಸದರಿ ಗ್ರಾಹಕರು ಯಾವುದೇ ಆಕ್ಷೇಪಣೆ ಸಲ್ಲಿಸಿದೆ ಕಾರಣ ಸದರಿ ಗ್ರಾಹಕರಿಗೆ ಈ ಕಛೇರಿ ಪತ್ರ ಸಂಖ್ಯೆ:ಶಉನಿ/ಸಕಾನಿ(ವಿ)/ಹು/ಸಲೆ/2016-17/7182 ದಿನಾಂಕ:18.03.2017 ರ ಪ್ರಕಾರ ಅಂತಿಮ ಕಂದಾಯ ನಿರ್ಧರಣಾ ಆದೇಶವನ್ನು ನೀಡಲಾಗಿದೆ.

5) ಸದರಿ ಗ್ರಾಹಕರು ನೀಡಿದ ಕಾಗದ ಪತ್ರಗಳನ್ನು ಪರಿಶೀಲಿಸಲಾಗಿ ದರಪಟ್ಟಿ ಬದಲಾವಣೆಯು (LT5 To LT3) ಈ ಕಛೇರಿ ಪತ್ರ ಸಂಖ್ಯೆ: AEE(E)JTA/785/DATE:30.05.2017 ರಂದು ದರಪಟ್ಟಿ ಬದಲಾವಣೆ ಮಾಡಿಕೊಂಡಿರುತ್ತಾರೆ,

6) ಸದರಿ ಗ್ರಾಹಕರು ಸದರಿ ಹಿಂಬಾಕಿ ಮೊತ್ತ ರೂ 24697/- ಗಳನ್ನು ರಶೀದಿ ಸಂಖ್ಯೆ :103246 ದಿನಾಂಕ:29.12.2017 ರಂದು ಪಾವತಿಸಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಆರ್.ಆರ್.ಸಂಖ್ಯೆ: MP9335 ಸ್ಥಾವರಕ್ಕೆ ವಿದ್ಯುತ್ ಅಧಿನಿಯಮ 42.01 ರಿಂದ 42.06 ರ ಪ್ರಕಾರ ಜಕಾತಿ ದುರಪಯೋಗ ಮಾಡಿಕೊಂಡಿದನ್ನು ಖಚಿತಪಡಿಸಿಕೊಂಡು ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್(ವಿ), MRT ಹುಬ್ಬಳ್ಳಿ ಇವರು ಹಿಂಬಾಕಿ ಪ್ರಕರಣವೆಂದು ದಾಖಲಿಸಿದ್ದು ಕ್ರಮಬದ್ಧವಾಗಿರುತ್ತೇದೆ ಎಂದು ತಮ್ಮ ಆದ್ಯ ಗಮನಕ್ಕೆ ತರಬಯಸಲಾಗಿದೆ.

## ಪ್ರಕರಣದ ಸಾರಾಂಶದ ಮೇಲೆ ವೇದಿಕೆಯ ಅಭಿಪ್ರಾಯ:

ಸದರ ಪ್ರಕರಣದಲ್ಲಿ ಗ್ರಾಹಕರ ಹೇಳಿಕೆ ಹಾಗೂ ನಿಗಮದ ಅಧಿಕಾರಿಗಳ ಹೇಳಿಕೆ ಮತ್ತು ಕಡತದಲ್ಲಿಯ ಕಾಗದ ಪತ್ರಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಮಾಹಿತಿ ಕಂಡು ಬರುತ್ತದೆ.

1. ಶ್ರೀಮತಿ, ಕಾಂಚಣಾ ವಿ ಜಿ. ಇವರ ಸ್ಥಾವರ ಸಂಖ್ಯೆ: : MP9335 ನೇದ್ದ ಸ್ಥಾವರವನ್ನು ಗ್ರಾಹಕರು ಸ್ಥಾವರವನ್ನು ತಮ್ಮ ಹೆಸರಿನಲ್ಲಿ ದಿನಾಂಕ:06-01-2017 ರಂದು ಎಲ್.ಟಿ-5 ಜಕಾತಿಯಡಿಯಲ್ಲಿ ಸಂಪರ್ಕಿತಗೊಂಡಿರುತ್ತದೆ. ಸ.ಕಾ.ನಿ.ಇಂ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-3, ಹೆಸ್ಕಾಂ, ಹುಬ್ಬಳ್ಳಿರವರು ಬಿಲ್ ಸಂಖ್ಯೆ:639896503012 ದಿನಾಂಕ:12-12-2017 ರಲ್ಲಿ ರೂ. 38,736/-ಗಳನ್ನು ತಪ್ಪಾಗಿ ಬೇಡಿಕೆ ಹೆಚ್ಚಿಸಿ, ಬಿಲ್ ನೀಡಿರುತ್ತಾರೆಂದು ಆಕ್ಷೇಪಿಸಿದ್ದು, ಸದರಿ ಬಿಲ್ಲನ್ನು ಪರಿಷ್ಕರಿಸಿ, ನೀಡುವಂತೆ, ದಿನಾಂಕ:03-01-2018 ರಲ್ಲಿ ವೇದಿಕೆಗೆ ವಿನಂತಿಸಿಕೊಂಡಿರುವುದು ಕಂಡುಬರುತ್ತದೆ.

.....4

2. ಸ್ಥಾವರ ಸಂಖ್ಯೆ: : MP9335 ನೇದ್ದ ಸ್ಥಾವರವು ದಿನಾಂಕ: 06-01-2017 ರಂದು ಎಲ್.ಟಿ-5 ಜಕಾತಿಯಡಿಯಲ್ಲಿ ಸಂಪರ್ಕಿತಗೊಂಡಿರುತ್ತದೆ. ಸದರಿ ಸ್ಥಾವರವು **LT-5** ದಿಂದ **LT-3** ಜಕಾತಿಗೆ ವಿದ್ಯುತ್ ದುರ್ಬಳಕೆಯಾಗಿರುವುದರಿಂದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಎಮ್.ಆರ್.ಟಿರವರು ವರದಿ ಸಲ್ಲಿಸಿದ್ದು, ವರದಿಯನ್ವಯ ರೂ.24,697/-ಗಳ ಹಿಂಬಾಕಿ ನೋಟೀಸ್‌ನ್ನು ಸ.ಕಾ.ನಿ.ಇಂ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-3ರವರ ಪತ್ರ ಸಂಖ್ಯೆ:6820 ದಿನಾಂಕ:01-03-2017 ರಲ್ಲಿ ತಾತ್ಕಾಲಿಕ ನೋಟೀಸ್ ಜಾರಿ ಮಾಡಲಾಗಿರುವುದು ಕಂಡು ಬರುತ್ತದೆ. ಸದರಿ ಗ್ರಾಹಕರು ಯಾವುದೇ ಆಕ್ಷಪಣೆ ಸಲ್ಲಿಸದೇ ಇವರು ಕಾರಣ ಸ.ಕಾ.ನಿ.ಇಂ(ವಿ), ಶಹರ ಉಪ ವಿಭಾಗ-3ರವರು ಪತ್ರ ಸಂಖ್ಯೆ:7182 ದಿನಾಂಕ:18-03-2010 ರಲ್ಲಿ ಅಂತಿಮ ಕಂದಾಯ ನಿರ್ಧರಣಾ ಆದೇಶವನ್ನು ನೀಡಲಾಗಿದೆ. ಸದರಿ ಸ್ಥಾವರಕ್ಕೆ ವಿದ್ಯುತ್ ಅಧಿನಿಯಮ 42.06 ರ ಪ್ರಕಾರ ಜಕಾತಿ ದುರಪಯೋಗ ಮಾಡಿಕೊಂಡಿದ್ದನ್ನು ಖಚಿತಪಡಿಸಿಕೊಂಡು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ).ಎಮ್.ಆರ್.ಟಿ ಹುಬ್ಬಳ್ಳಿ ಇವರು ಹಿಂಬಾಕಿ ಪ್ರಕರಣವೆಂದು ದಾಖಲಿಸಿದ್ದು, ಕ್ರಮಬದ್ಧವಾಗಿರುತ್ತದೆ ಎಂದು ಸ.ಕಾ.ನಿ.ಇಂ(ವಿ), ಶಹರ ಉಪ ವಿಭಾಗ-3, ಹೆಸ್ಕಾಂ, ಹುಬ್ಬಳ್ಳಿರವರು ವೇದಿಕೆಗೆ ವಿನಂತಿಸಿಕೊಂಡಿರುವುದು ಕಂಡು ಬರುತ್ತದೆ.

ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಿದಾಗ ಸದರ ಪ್ರಕರಣದಲ್ಲಿ ಗ್ರಾಹಕರು ಎಲ್.ಟಿ-5 ಜಕಾತಿಯಡಿಯಲ್ಲಿ ಸಂಪರ್ಕ ಪಡೆದು ಎಲ್.ಟಿ-3 ಜಕಾತಿಯಡಿಯಲ್ಲಿ ಬಳಿಸಿಕೊಂಡಿರುವುದನ್ನು ಸ.ಕಾ.ನಿ.ಇಂ(ವಿ), ಎಮ್.ಆರ್.ಟಿ.ರವರು ನೀಡಿರುವ ವರದಿಯನ್ವಯ ಸ.ಕಾ.ನಿ.ಇಂ(ವಿ) ಶಹರ ಉಪ ವಿಭಾಗ-3, ಹೆಸ್ಕಾಂ, ಹುಬ್ಬಳ್ಳಿರವರು ರೂ. ರೂ. 24,697/-ಗಳ ಹಿಂಬಾಕಿ ವಿಧಿಸಿರುವುದು ಕಂಡು ಬಂದಿದ್ದು, ಆದರೆ ಸದರಿ ಹಿಂಬಾಕಿ ಬಿಲ್‌ಗೆ ಗ್ರಾಹಕರ ಯಾವುದೇ ಆಕ್ಷೇಪಣೆ ನೀಡಿರುವುದಿಲ್ಲವೆಂದು ಸ.ಕಾ.ನಿ.ಇಂ(ವಿ)ರವರು ಅಂತಿಮ ಆದೇಶ ಹೊರಡಿಸಿರುವುದು ಸಹ ಕಂಡುಬರುತ್ತದೆ. ಆದರೆ ಗ್ರಾಹಕರು ವೇದಿಕಗೆ ಸ.ಕಾ.ನಿ.ಇಂ(ವಿ), ಶಹರ ಉಪ ವಿಭಾಗ-3ರವರಿಂದ ಬೇಡಿಕೆಗೊಳಿಸಿರುವ ರೂ.24,697/-ನ್ನು ಪರಿಷ್ಕರಿಸಿ ನೀಡುವಂತೆ ಗ್ರಾಹಕರು ವಿನಂತಿಸಿಕೊಂಡಿರುವುದು ಸಹ ಕಂಡುಬಂದಿರುತ್ತದೆ. ಸದರಿ ಪ್ರಕರಣವು ವಿದ್ಯುತ್‌ಚ್ಛಕ್ತಿ ಅಧಿನಿಯಮದ 126 ನೇ ಪ್ರಕರಣದಡಿಯಲ್ಲಿ ಬರುವುದರಿಂದ ಗ್ರಾಹಕರ ಕುಂದು ಕೊರತೆ ನಿವಾರಣೆ ವೇದಿಕೆಯ ವ್ಯಾಪ್ತಿಗೆ ಬರುವುದಿಲ್ಲ ಆದಾಗ್ಯೂ ಈ ಪ್ರಕರಣದಲ್ಲಿ **K.E.R.C. COS ರ ರೆಗ್ಯೂಲೇಷನ್ 42.07** ಕಂಪನಿ ವತಿಯಿಂದ ಸರಿಯಾಗಿ ಪಾಲನೆಯಾಗದೇ ಇರುವುದು ವೇದಿಕೆ ಸಲ್ಲಿಸಿದ ದಾಖಲಾತಿಗಳನ್ವಯ ಕಂಡುಬಂದಿದ್ದು, ಸಂಬಂಧಿಸಿದ ಉಪ ವಿಭಾಗಧಿಕಾರಿಗಳು ಗ್ರಾಹಕರಿಗೆ **K.E.R.C. Conditions of Supply of Electricity Of Distribution Licensees in The State of Karnataka ರ ರೆಗ್ಯೂಲೇಷನ್ 42.07** ರ ಅನ್ವಯ ಇನ್ನೊಂದು ಅವಕಾಶ ನೀಡಿ, ಸದರ ಪ್ರಕರಣದಲ್ಲಿ ನಿಯಮಾನುಸಾರ ವಿಚಾರಣೆ ಕೈಗೊಂಡು ಅಂತಿಮ ಆದೇಶ ಹೊರಡಿಸುವುದು ಸೂಕ್ತವೆನಿಸುತ್ತದೆ.

**ಆದೇಶ ಸಂಖ್ಯೆ:ಅಇಂ(ವಿ)/ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ-230/** CYS-785 **ದಿನಾಂಕ: 11 SEP 2018**

ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಆದೇಶ ಸಂಖ್ಯೆ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/13-14/ಸಿವೈಎಸ್-769 ದಿ.16.07.2013 ರನ್ವಯ ಹಾಗೂ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/16-17/ಸಿವೈಎಸ್-3851 ದಿ.28.01.2017 ಮತ್ತು ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/15-16/ಸಿವೈಎಸ್-2296 ದಿ.06.10.2015 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

1. ಸದರಿ ಪ್ರಕಣವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಶಹರ ಉಪ ವಿಭಾಗ-3, ಹೆಸ್ಕಾಂ, ಹುಬ್ಬಳ್ಳಿರವರಿಗೆ ಹಿಂದಿರುಗಿಸುತ್ತಾ, ಸದರ ಪ್ರಕಣರವನ್ನು ಮತ್ತೊಮ್ಮೆ ನಿಯಮಾನುಸಾರ ಪರಿಶೀಲಿಸಿ, ಅಂತಿಮ ಆದೇಶ ಹೊರಡಿಸುವಂತೆ ಆದೇಶಿಸಲಾಗಿದೆ.

**(ರಾಮಪ್ಪ ಎನ್ ಎನ್)**
ಉಪಲೆಕ್ಕ ನಿಯಂತ್ರಣಾಧಿಕಾರಿ
ಹಾಗೂ ಗ್ರಾಕುಂಕೊನಿವೇ ಸದಸ್ಯರು
ಕಾ ಮತ್ತು ಪಾ ವೃತ್ತ, ಹುಬ್ಬಳ್ಳಿ

**(ಲೀಲಾ ಆರ್ ಹಿರೇಮಠ)**
ಆಯೋಗದಿಂದ ನಿಯೋಜಿಸಲಾದ
ಸದಸ್ಯರು.

**(ಎ ಎಚ್ ಕಾಂಬಳೆ)**
ಅಧೀಕ್ಷಕ ಇಂಜಿನೀಯರ(ವಿ)
ಕಾ & ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ
ಹಾಗೂ ಅಧ್ಯಕ್ಷರು, ಧಾರವಾಡ ಜಿಲ್ಲೆ
ಗ್ರಾ.ಕುಂ.ಕೊ.ನಿ.ವೇದಿಕೆ.

.....5

ಗೆ,

**M/S, Kanchan.V.G,**
**R R No : MP9335**
**B-498, Industrial Estate,**
**Gokul Road, Hubballi-580030.**

**ಪ್ರತಿ:**

1. ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ, ಹೆಸ್ಕಾಂ, ಕೇಶ್ವಾಪುರ, ಹುಬ್ಬಳ್ಳಿರವರ ದಯಾಪರ ಮಾಹಿತಿಗಾಗಿ.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕಂಪನಿ ಕಛೇರಿ, ಹುವಿಸಕಂನಿ, ಹುಬ್ಬಳ್ಳಿರವರ ಆದರ ಪೂರ್ವಕ ಮಾಹಿತಿಗಾಗಿ.
3. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ವಿಭಾಗ, ಹುವಿಸಕಂನಿ., ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ. ಸೂಕ್ತ ಕ್ರಮಕ್ಕಾಗಿ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-3, ಹುವಿಸಕಂನಿ., ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಮಹಾ ಕಡತ.